# ಅಕ್ಕಯ್ ಪದ್ಮಸಾಲಿ

'ಬಹುರೂಪಿ' ಪ್ರಕಟಿಸಿರುವ 'ಅಕ್ಕಯ್' ಆತ್ಮಕಥನದಿಂದ ಅಕ್ಕಯ್ ಪದ್ಮಸಾಲಿ ಸುದ್ದಿಯಲ್ಲಿದ್ದಾರೆ. ಹಿಂದೆ ನೋಡಿದ ಇಂಗ್ಲಿಷ್ ಸಿನಿಮಾ 'ಡ್ಯಾನಿಷ್ ಗರ್ಲ್' ಮತ್ತು ಸಂಚಾರಿ ವಿಜಯ್ ಅವರ 'ನಾನು ಅವನಲ್ಲ, ಅವಳು' ತುಂಬ ಕಾಡುತ್ತವೆ.

ಮನೋವಿಜ್ಞಾನದ ಪ್ರಕಾರ ಗಂಡಿನಲ್ಲಿ ಮತ್ತು ಹೆಣ್ಣಿನಲ್ಲಿ ಹೆಣ್ಣಿನ ಮತ್ತು ಗಂಡಿನ ಮನಸ್ಥಿತಿಗಳು ಜಾಗೃತವಾಗಿರುತ್ತವೆ. ಅವುಗಳನ್ನು **Anima** ಮತ್ತು **animus** ಎಂದು ಕರೆಯಲಾಗುತ್ತವೆ. ಈ ಎರಡೂ ಗುಣಗಳು ಹತ್ತಿಕ್ಕಿದಷ್ಟೂ ಕಾಲ ಒಳಗಿರುತ್ತವೆ. ಹತ್ತಿಕ್ಕಲಾರದ ದುರ್ಬಲತೆ ಉಂಟಾದಾಗ ಹೊರಬರುತ್ತವೆ. ದೇಹದ ಭಾಷೆಗೂ, ಮನಸ್ಸಿನ ಭಾಷೆಗೂ ಘರ್ಷಣೆ ಆರಂಭವಾಗುವುದು ಎಲ್ಲ ದುರಂತಗಳ ಮೂಲವಾಗಿದೆ.

'ಡ್ಯಾನಿಷ್ ಗರ್ಲ್' ಸಿನಿಮಾದಲ್ಲಿ ಕಲಾವಿದ ದಂಪತಿಯ ಅನುರೂಪದ ದಾಂಪತ್ಯ ಚಿತ್ರಣ ಬರುತ್ತದೆ. ಗಂಡ ಪ್ರಕೃತಿ ಚಿತ್ರಗಳನ್ನು ಚಿತ್ರಿಸಿದರೆ, ಹೆಂಡತಿ ವ್ಯಕ್ತಿಚಿತ್ರಗಳನ್ನು ಚಿತ್ರಿಸುತ್ತಾಳೆ. ಅವರಲ್ಲಿ ಕೊರತೆಯೆಂಬುದೇನೂ ಇರುವುದಿಲ್ಲ. ಮುಂದೆ ಸಮಸ್ಯೆ ಯಾವ ರೀತಿಯಲ್ಲಿ ಜೀವನದಲ್ಲಿ ಅಡಿಯಿಡುತ್ತದೆ ಎಂಬ ಅರಿವು ಇಬ್ಬರಿಗೂ ಇಲ್ಲ.

ತನ್ನ ಚಿತ್ರರಚನೆಗೆ ಮಾಡೆಲ್ ಆಗಿ ಕೂರುತ್ತಿದ್ದವಳು ಒಂದು ದಿನ ಬರುವುದು ತಡವಾಗುತ್ತದೆ. ಆಗ ಹೆಂಡತಿ ತನ್ನ ಗಂಡನಿಗೇ ಅವಳ ಉಡುಗೆ ತೊಡಿಸಿ ತನ್ನ ಮುಂದೆ ಕೂಡಿಸಿ ಚಿತ್ರ ರಚಿಸುತ್ತಿದ್ದಾಳೆ. ಗಂಡನಲ್ಲಿ ಅದುವರೆಗೂ ಅದುಮಿಟ್ಟ ಭಾವಗಳು ನಿಧಾನವಾಗಿ ಕೆರಳಲಾರಂಭಿಸುತ್ತವೆ. ಅವನು ಹದಿಹರೆಯದಲ್ಲಿ ತನ್ನಲ್ಲಿ ಉಕ್ಕುತ್ತಿದ್ದ ಹೆಣ್ಣುಭಾವಗಳನ್ನು ಅದುಮಿಟ್ಟು ಸಮಾಜದೆದುರು ಗಂಡಾಗಿ ಜೀವಿಸುತ್ತಿದ್ದವನು. ಈಗ ಅವನಲ್ಲಿ ಅಡಗಿದ್ದ ಹೆಣ್ತನವನ್ನು ಬಡಿದೆಬ್ಬಿಸುತ್ತವೆ. ರೇಷ್ಮೆಯ ಗೂಡಿನಲ್ಲಿನ ಹುಳುವೊಂದು ನಿಧಾನವಾಗಿ ಚಿಟ್ಟೆಯಾಗಿ ಹಾರಲು ಸಿದ್ಧವಾಗುವಂತೆ ಅವನ ಒಳಗು ನಿಧಾನವಾಗಿ ಕಣ್ತೆರೆಯಲಾರಂಭಿಸುತ್ತದೆ.

ಮುಂದಿನ ದಿನಗಳಲ್ಲಿ ರೂಪಾಂತರವೊಂದು ಘಟಿಸುತ್ತಿರುವುದು, ಅದು ತಮ್ಮಿಬ್ಬರ ಅನ್ಯೋನ್ಯ ಸಂಬಂಧಕ್ಕೆ ತೊಡಕಾಗುತ್ತಿರುವುದು ಇಬ್ಬರಿಗೂ ಅರಿವಾಗುತ್ತದೆ. ಹೆಂಡತಿ ಬೇಡಿಕೊಂಡರೂ ಗಂಡ ತನ್ನ ಅರಳುವಿಕೆಯನ್ನು ನಿಲ್ಲಿಸಲಾರ. ಕೊನೆಗೊಂದು ದಿನ ಹೆಂಡತಿ ಅವನು ಪೂರ್ಣವಾಗಿ ಹೆಣ್ಣಾಗುವುದಕ್ಕೆ ಅನುಮತಿ ನೀಡುತ್ತಾಳೆ. ಅವನು ಅವಳಾಗಿ ಸಾವಿನಲ್ಲಿ ಕೊನೆಗೊಳ್ಳುತ್ತದೆ. ಅವನು ಹೆಣ್ಣಾಗಿ ಮಾಡೆಲ್ ಆದ ಚಿತ್ರ ಪ್ರಸಿದ್ಧಿಯನ್ನು ಪಡೆಯುತ್ತದೆ. ಆದರೆ ಅವನು ಚಿಟ್ಟೆಯಾಗಿ ಇಹಲೋಕವನ್ನೇ ತ್ಯಜಿಸಿ ಹಾರಿ ಹೋಗಿರುತ್ತಾನೆ. ಹೀಗೆ ದುರಂತದಲ್ಲಿ ಈ ಚಿತ್ರ ಮುಗಿಯುತ್ತದೆ.

ಎಂದೋ ನೋಡಿದ್ದ ಈ ಚಿತ್ರ ಮತ್ತೆ ಚಿಟ್ಟೆಯಾಗಿ ಕಣ್ಣುಮುಂದೆ ಹಾರಿದ್ದು ಅಕ್ಕಯ್ ಪದ್ಮಸಾಲಿ ಅವರ ನಿರೂಪಣೆಯ ಆತ್ಮಕಥೆಯನ್ನು ಓದಿದಾಗ. ಇದಕ್ಕೂ ಮುನ್ನ 'ಲಿವಿಂಗ್ ಸ್ಮೈಲ್ ವಿದ್ಯಾ' ಹಾಗೂ ರೇವತಿಯವರ ಆತ್ಮಕತೆಗಳು ಪ್ರಕಟವಾಗಿದ್ದವು. ಇವುಗಳನ್ನು ಕ್ರಮವಾಗಿ ತಮಿಳ್ ಸೆಲ್ವಿ ಹಾಗೂ ದು. ಸರಸ್ವತಿ ಬರೆದಿದ್ದರು.

ಅಕ್ಕಯ್ ಆತ್ಮಕಥನ ತನ್ನನ್ನು ಬೇರೆಯ ರೀತಿಯಲ್ಲಿ ಕಂಡುಕೊಳ್ಳಲು ಯತ್ನಿಸುತ್ತದೆ. ಸ್ವಮರುಕ ಅಥವಾ ಸಮಾಜದ ಮರುಕದಿಂದ ದೂರ ನಿಂತ ಕಥನವಿದು. ಅಕ್ಕಯ್ ಅವರ ಪೂರ್ವದ ಹೆಸರು ಜಗದೀಶ್. ಸುಮಾರು 8ನೇ ವಯಸ್ಸಿನಲ್ಲಿ ತಾನು ಹುಡುಗನಲ್ಲ ಹುಡುಗಿ ಎಂದು ಅರಿತುಕೊಳ್ಳುತ್ತಾರೆ. ಒಂದು ದಿನ ಹುಡುಗಿಯರೊಂದಿಗೆ ಕುಂಟಾಬಿಲ್ಲೆ ಆಡುತ್ತಿದ್ದ ಇವರನ್ನು ಥಳಿಸಿ ಪಾದದ ಮೇಲೆ ಕುದಿವ ಬಿಸಿನೀರನ್ನು ಸುರಿದು ಶಿಕ್ಷಿಸಲಾಗುತ್ತದೆ.

ಸಾಮಾನ್ಯವಾಗಿ ಲೈಂಗಿಕ ಅಲ್ಪಸಂಖ್ಯಾತರ ಕಥನಗಳು ಮನೆಬಿಟ್ಟು ಓಡಿಹೋಗುವುದು, ಸೆಕ್ಸ್ ವರ್ಕರ್ ಆಗಿ ಕೆಲಸ ಮಾಡುವುದು, ಅವರ ಮೇಲೆ ನಡೆಯುವ ದೌರ್ಜನ್ಯ ಭೀಭತ್ಸವೆನ್ನುವಂತೆ, ಕರುಣೆಯನ್ನು ನಿರೀಕ್ಷಿಸುವಂತೆ ಇರುತ್ತವೆ. ಅಕ್ಕಯ್ ಕಥನದ ಗುರಿ ಕೇವಲ ತನ್ನ ನೋವಿನ, ಅಪಮಾನದ , ಸಂಕಟಗಳ ಕ್ಷಣಗಳನ್ನು ದಾಖಲಿಸುವುದರ ಕಡೆಗೆ ಇಲ್ಲ. ಲೈಂಗಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದರೂ ನಮ್ಮನ್ನು ಮನುಷ್ಯರನ್ನಾಗಿ ನಡೆಸಿಕೊಳ್ಳಿ ಎಂಬ ನಿಲುವಿನಲ್ಲಿ ತನ್ನ ಹೋರಾಟ ಇತರರ ಹೋರಾಟಕ್ಕಿಂತ ಭಿನ್ನ ಎಂಬುದನ್ನು ನಿರೂಪಿಸಿದ್ದಾರೆ. ಸೆಕ್ಸ್, ಲಿಂಗ ಬದಲಾವಣೆ ಇವೆಲ್ಲಾ ಕೇಳುವುದಕ್ಕೆ ಕಸಿವಿಸಿ ಎನ್ನುವ ಕಾಲಘಟ್ಟದಲ್ಲಿ ನಾವಿಲ್ಲ ಎಂಬುದನ್ನು ಅಕ್ಕಯ್ ಹೋರಾಟದ ಕಥನ ನಿರೂಪಿಸುತ್ತದೆ.

ಸರ್ಜರಿ ಮುಖಾಂತರ ಹೆಣ್ಣಾಗಲು ನಿರ್ಧರಿಸಿ ಆಸ್ಪತ್ರೆ ಸೇರಿದ ಸಂದರ್ಭದಲ್ಲಿನ ತಲ್ಲಣ ಓದುಗರನ್ನೂ ಕಾಡುತ್ತವೆ. ಹಿಜ್ರಾ ಸಮುದಾಯ ತಾವೇ ಮಾಡುವ ಸರ್ಜರಿ ಭೀಕರವಾಗಿರುತ್ತದೆ. ಅದರಿಂದ ತಪ್ಪಿಸಿಕೊಂಡು ಅಕ್ಕಯ್ ವೈದ್ಯಕೀಯ ಸರ್ಜರಿಯ ಮೊರೆ ಹೋದರೂ ಅದೂ ಕೂಡ ಸಾಕಷ್ಟು ಪ್ರಾಣಹಿಂಡುವ ಯಾತನೆಯನ್ನು ಕೊಡುವಂತದ್ದು ಎಂಬ ವಿವರಣೆಗಳು ಇಲ್ಲಿ ಸಿಗುತ್ತವೆ.

ನಿರ್ಭಯ ಅತ್ಯಾಚಾರದ ಪ್ರಕರಣದಲ್ಲಿ ಯುಪಿಎ ಸರ್ಕಾರ ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯನ್ಯಾಯಮೂರ್ತಿ ವರ್ಮಾ ಅವರ ಸಮಿತಿಯನ್ನು ನೇಮಿಸುತ್ತದೆ. 'ಸಂಗಮ' ಸಂಸ್ಥೆಯ ಭಾಗವಾಗಿದ್ದ ಅಕ್ಕಯ್ ತಮ್ಮ ಸಮುದಾಯದ ದನಿ ಮಂಡಿಸಲು ಇತರ ಮಹಿಳಾ ಸಂಘಟನೆಗಳ ಜೊತೆಗೆ ಭಾಗವಹಿಸುತ್ತಾರೆ. ಅಲ್ಪಸಂಖ್ಯಾತರ ಮೇಲೆ ನಡೆಯುವ ದೌರ್ಜನ್ಯವನ್ನು ಸಾಮಾನ್ಯ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯವೆಂದೇ ಪರಿಗಣಿಸಲು ಬಲವಾಗಿ ವಾದಿಸುತ್ತಾರೆ. ಲಿಂಗಬದಲಾವಣೆಯ ನಂತರ ಮದುವೆ ಮಾಡಿಕೊಂಡ ಹಾಗೂ ವಿಚ್ಛೇದನ ಮಾಡಿಕೊಂಡ ರಾಜ್ಯದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಇವರದು. ಮಗುವೊಂದನ್ನು ದತ್ತು ತೆಗೆದುಕೊಂಡಿರುವ ಪೋಷಿಸುತ್ತಿರುವ ತಾಯಿಯೂ ಹೌದು. ಸಂಗಮ, ವಿಮೋಚನಾ, ಒಂದೆಡೆ ಮುಂತಾದ ಸಂಸ್ಥೆಗಳ ಜೊತೆ ಕೆಲಸ ಮಾಡುತ್ತಿರುವ ಅಕ್ಕಯ್ ಪದ್ಮಸಾಲಿ ತಮ್ಮ ಸಮುದಾಯದ ಏಳಿಗೆಗಾಗಿ ದುಡಿಯುತ್ತಿರುವ ದಿಟ್ಟ ವ್ಯಕ್ತಿ.

ಇವರ ಹೋರಾಟದ ವ್ಯಕ್ತಿತ್ವಕ್ಕಾಗಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಹಿಂದೂ ಪತ್ರಿಕೆಯ 'ಬಿಸಿನೆಸ್ ಲೈನ್ ಚೇಂಜ್ ಮೇಕರ್ಸ್9' ಮುಂತಾದ ಪ್ರಶಸ್ತಿಗಳನ್ನು ಒಳಗೊಂಡಂತೆ ಹಲವು ಮನ್ನಣೆಗಳು ದೊರೆತಿವೆ. ಸಮಾಜದ ವ್ಯವಸ್ಥೆಯನ್ನು ಒಪ್ಪಿಕೊಳ್ಳದ, ತಿದ್ದುಪಡಿಗಾಗಿ ಪ್ರಶ್ನಿಸುವ ಮನೋಭಾವದ ಅಕ್ಕಯ್ ತನ್ನ ಸಮುದಾಯದ ಹಕ್ಕುಬಾಧ್ಯತೆಗಳಿಗಾಗಿ ಸದಾ ಎಚ್ಚರಿರುವ ವ್ಯಕ್ತಿತ್ವ. ಹಲವು ಕೊರತೆಗಳ ನಡುವೆಯೂ ತನ್ನನ್ನು ತಾನು ತನ್ನ ಇಚ್ಛಾಬಲದಿಂದಲೇ ಕಂಡುಕೊಂಡ ಹೋರಾಟಗಾರ್ತಿಯೂ ಹೌದು.

ದೇಹದ ರಚನೆಯೇ ಗೊಂದಲದ ಗೂಡಾದಾಗ ಆ ಗೂಡಿನಿಂದ ಚಿಟ್ಟೆಯಾಗಿ ಹಾರಲು ಯತ್ನಿಸುವವರಿಗೆ ಈ ಆತ್ಮಕಥನ ಸ್ಫೂರ್ತಿಯನ್ನು ಕೊಡಬಲ್ಲ ಕೃತಿಯಾಗಿದೆ.

■ **ಅಮೃತಮತಿ**

## ಮಾತೇ ಮುತ್ತು

- ಪ್ರಪಂಚವೊಂದು ಅದ್ಭುತವಾದ ಪುಸ್ತಕ. ಅದನ್ನು ಓದಲು ಬಾರದವನು ನಿರುಪಯುಕ್ತ.
  —ಸ್ವಾಮಿವಿವೇಕಾನಂದ

- ಪ್ರಾಮಾಣಿಕತೆ ಮತ್ತು ಸಭ್ಯತೆ ಇಲ್ಲದವನ ಎಲ್ಲ ಜ್ಞಾನವು, ಎಲ್ಲ ಉಪದೇಶವೂ ಕಷ್ಟದಾಯಕವಾಗಿರುತ್ತದೆ.
  —ಮಾಂಟೇನ್

- ಭಯವೆಂಬುದು ನಮ್ಮ ಸ್ವಾರ್ತತೆಯ ದೃಷ್ಟಿಗೆ ಮಾತ್ರ.
  —ಕುವೆಂಪು

- ಮಗಳನ್ನು ಹೊಗಳಿ, ಮಗನನ್ನು ಬಯ್ದು ಬೆಳೆಸಬೇಕು.
  —ಪ್ರಪಂಚ

- ಮನುಷ್ಯ ಎಂಥ ಗೌಪ್ಯ ಕಾಯ್ದುಕೊಂಡಾನು ಆದರೆ ತನ್ನ ಬಗ್ಗೆ ತನಗಿರುವ ಅಭಿಪ್ರಾಯವನ್ನು ಗೌಪ್ಯವಾಗಿಡುವುದು ಅತಿ ಕಷ್ಟ.
  — ಪಾಸ್ಕಲ್

- ಮಾತನ ಮಾಳೆಯೊಳಗೆ ಅರಿವೆ ಎಂಬುದುಂಟೆ?
  —ಅಲ್ಲಮಪ್ರಭು